**ದಿನಾಂಕಃ 06.04.2026 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಟಿ.ವಿ.ಎಸ್., ವಕೀಲರಿಂದಃ**

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ಪ್ರತಿವಾದಿಗಳು ಕ್ರಯದ ಕರಾರು ಪತ್ರ ಆಗುವ ಎರಡು ಮೂರು ವರ್ಷಗಳ ಹಿಂದಿನಿಂದ ಪರಿಚಯ. 4 ನೇ ಪ್ರತಿವಾದಿ ನನ್ನ ಸ್ನೇಹಿತ ಎನ್ನುವುದು ಸರಿಯಲ್ಲ, ಕೇವಲ ಪರಿಚಿತರು. 4 ನೇ ಪ್ರತಿವಾದಿ ಕೂಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳಿಗೆ ಮದುವೆಯಾಗಿದ್ದು, ಅವರು ತಮ್ಮ ತಮ್ಮ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ವಯಸ್ಸಾಗಿದ್ದ ಕಾರಣ ಅವರನ್ನು 4 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಅಜ್ಜಿ ತಿಮ್ಮಕ್ಕ ರವರನ್ನು ನೋಡಿದ್ದೇನೆ. ನಾನು ಹೇಳಿದಂತೆ ಕ್ರಯದ ಕರಾರು ಪತ್ರ ಆದಾಗ ತಿಮ್ಮಕ್ಕರವರಿಗೆ ಸುಮಾರು 85 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ವಯಸ್ಸಾಗಿದ್ದ ಕಾರಣ ತಿಮ್ಮಕ್ಕ ರವರಿಗೆ ಖಾಯಿಗಳು ಇತ್ತು ಎಂದರೆ ಸರಿಯಲ್ಲ. ಕ್ರಯದ ಕರಾರು ಆದ 6 ತಿಂಗಳ ನಂತರ ತಿಮ್ಮಕ್ಕ ರವರು ಮರಣ ಹೊಂದಿದ್ದರು ಎಂದರೆ ಸರಿ. ಕ್ರಯದ ಕರಾರಾದ ಸಮಯದಲ್ಲಿ 4 ನೇ ಪ್ರತಿವಾದಿ ಅಸ್ವಸ್ಥನಾಗಿದ್ದ ಎಂದರೆ ಸರಿಯಲ್ಲ. ತಿಮ್ಮಕ್ಕ ರವರಿಗೆ ವಯಸ್ಸಾದ ಕಾರಣ ಮತ್ತು 4 ನೇ ಪ್ರತಿವಾದಿ ಅಸ್ವಸ್ಥರಾದ ಕಾರಣ ಅವರಿಗೆ ಹಣದ ಅವಶ್ಯಕತೆ ಇತ್ತು ಎಂದರೆ ಸರಿ. ಹಣದ ಅವಶ್ಯಕತೆ ಇದ್ದ ಕಾರಣ, ಪ್ರತಿವಾದಿಗಳು ನಮ್ಮೊಂದಿಗೆ ಕ್ರಯದ

ಕರಾರು ಪತ್ರ ಮಾಡಿಕೊಂಡು ನಮ್ಮಿಂದ ಪಡೆದ ಹಣವನ್ನು ಸಾಲದ ಮರುಪಾವತಿಗೆ ಬಳಸಿಕೊಂಡಿದ್ದರು ಎಂದರೆ ಸರಿ.

ಪ್ರತಿವಾದಿಗಳಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶವಿರಲಿಲ್ಲ ಎಂದರೆ ಸರಿಯಲ್ಲ. ಕೇಲವ ನಿನ್ನಿಂದ ಬಡ್ಡಿಗಾಗಿ ಸಾಲ ಪಡೆದಿದ್ದು ಆ ಸಾಲದ ಭದ್ರತೆಗಾಗಿ ನಿಪಿ.1 ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯು ಎ ಪಿ ಎಂ ಸಿ ಯಾರ್ಡಿನ ಪಕ್ಕದಲ್ಲಿದೆ ಎಂದರೆ ಸರಿ. ದಾವಾ ಆಸ್ತಿಯು ಕಸಬಾ ಹೋಬಳಿ ಉನಿಕಿಲಿ ಗ್ರಾಮಕ್ಕೆ ಸೇರಿದೆ ಎಂದರೆ ಸರಿ. 2018-19 ರಲ್ಲಿ ಉನಿಕಿಲಿ ಗ್ರಾಮದ ಸರ್ವೇ ನಂಬರ್ ಆಸ್ತಿಗಳಿಗೆ ಪ್ರತಿ ಗುಂಟೆಗೆ ಸರ್ಕಾರವು ಎಷ್ಟು ಮೌಲ್ಯ ನಿರ್ಧರಿಸಿದ್ದೆ ಎಂದರೆ ನನಗೆ ಗೊತ್ತಿಲ್ಲ, ಆದರೆ 16 ಗುಂಟೆಗೆ 3 ಲಕ್ಷ 36 ರೂಪಾಯಿಗಳ ಮೌಲ್ಯವಿತ್ತು. 2018-19 ರಲ್ಲಿ ಉನಿಕಿಲಿ ಗ್ರಾಮದ ಸರ್ವೇ ನಂಬರ್ ಆಸ್ತಿಗಳು ರಸ್ತೆಗೆ ಹೊಂದಿಕೊಂಡಲ್ಲಿ ಪ್ರತಿ ಎಕರೆಗೆ 30 ಲಕ್ಷ ಮೌಲ್ಯ ನಿಗಧಿಪಡಿಸಿದ್ದರು ಎಂದರೆ ಸರಿಯಲ್ಲ. ಸರ್ವೇ ನಂಬರ್ 114 ಭಾಗಾಯಿತು ಜಮೀನು ಎಂದರೆ ಸರಿ. ರಸ್ತೆಗೆ ಹೊಂದದೇ ಇದ್ದ ಜಮೀನುಗಳಿಗೆ ಪ್ರತಿ ಎಕರೆ ಖುಷ್ಕಿ ಜಮೀನು ರೂ.8,38,000/, ತರಿ ರೂ.12,57,000/ ಭಾಗಾಯಿತು ಜಮೀನು ರೂ.18,86,000/ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಕೇವಲ ರೂ. 2,00,000/ ಸಾಲ ಪಡೆದಿದ್ದು ಹಾಗಾಗಿ ಕೇವಲ ರೂ.3,36,000/ ಕ್ರಯದ ಹಣ ಕಾಣಿಸಿದ್ದು ಅದು ಸರ್ಕಾರದ ಮೌಲ್ಯಗಿಂತ ಬಹಳ ಕಡಿಮೆ ಇದೆ ಎಂದರೆ ಸರಿಯಲ್ಲ.

ಪ್ರತಿವಾದಿಗಳಿಗೆ ದಾವಾ ಆಸ್ತಿಯನ್ನು ಬಿಟ್ಟು ಬೇರೆ ಆಸ್ತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಕರಾರು ಪತ್ರ ಮಾಡುವ ಸಮಯದಲ್ಲಿ ದಾವಾ ಆಸ್ತಿಯ ಮೂಲ ಪತ್ರವನ್ನು ನೋಡಿದ್ದೆ . ಮೂಲ ಪತ್ರವು ಹಿಂದಿನ ಕ್ರಯಪತ್ರವಾಗಿತ್ತು. ಆದರೆ ಆ ಕ್ರಯಪತ್ರ ತಿಮ್ಮಕ್ಕ ರವರ ಪರವಾಗಿ ಆಗಿತ್ತು, ಯಾರು ಬರೆದು ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ಆ ಮೂಲ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ತಿಮ್ಮಕ್ಕ ರವರಿಗೆ ದಾವಾ ಆಸ್ತಿಯು ಪಿತ್ರಾರ್ಜಿತವಾಗಿ ಬಂದಿತ್ತು, ಅವರು ಯಾವುದೇ ಕ್ರಯಪತ್ರದ ಅಡಿಯಲ್ಲಿ ಖರೀದಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಕ್ರಯದ ಕರಾರು ಪತ್ರ ಮಾಡುವ ಸಮಯದಲ್ಲಿ ಕ್ರಯಕ್ಕೆ ಪಡೆದುಕೊಳ್ಳಲು ನಿನ್ನಿಂದ ಯಾವುದೇ ತೊಂದರೆ ಇರಲಿಲ್ಲ, ಆದರೆ ಪ್ರತಿವಾದಿಗಳು ದಾಖಲೆಗಳನ್ನು ಒದಗಿಸಲು ಕಾಲಾವಕಾಶ ಕೇಳಿದಕ್ಕೆ ಮುಂದೂಡಲಾಗಿತ್ತು. ಕ್ರಯಪತ್ರದ ನೋಂದಾಣೆಗೆ ಯಾವ ಕ್ರಯಪತ್ರ ಬೇಕಾಗಿತ್ತು ಎಂದು ನನಗೆ ಗೊತ್ತಿಲ್ಲ. ಕ್ರಯದ ಕರಾರು ಆಗದೇ ಇದ್ದ ಕಾರಣ ಮತ್ತು ನಾನು ನೀಡಿದ್ದ ಹಣವು ಕೇವಲ ಸಾಲವಾಗಿದ್ದ ಕಾರಣ ಅದೇ ದಿನ ಕ್ರಯ ಪತ್ರ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಉನಿಕಿಲಿ ಗ್ರಾಮದ ಸರ್ವೇ ನಂಬರ್ ಆಸ್ತಿಗಳು ಶ್ರೀನಿವಾಸಪುರ ಪುರಸಭೆಯ ವ್ಯಾಪ್ತಿಗೆ ಒಳಪಡುವ ಆಸ್ತಿಗಳಿಗೆ ಅಂಟಿಕೊಂಡಿದೆ ಎಂದರೆ ಸರಿ. ಪ್ರಸ್ತುತದಲ್ಲಿ ದಾವಾ ಆಸ್ತಿಯ ಬೆಲೆಯು ಹೆಚ್ಚಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಗಳು ತಾವು ಪಡೆದ ಸಾಲದ ಹಣವನ್ನು ಬಡ್ಡಿ ಸಮೇತ ಮರಳಿಸಲು ಸಿದ್ಧರಾಗಿದ್ದರೂ ಸಹಾ ನಾನು ಅದನ್ನು ಪಡೆಯದೆ ಆಸ್ತಿ ಕಬಳಿಸುವ ಉದ್ದೇಶದಿಂದ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಹಲವಾರು ಬಾರಿ ನನಗೆ ಹಣ ಮರಳಿ ಪಡೆಯಲು ಕೋರಿಕೊಂಡಿದ್ದರೂ ಸಹಾ ನಾನು ಅಕ್ರಮವಾಗಿ ರೂ.10,00,000/ ಬೇಡಿಕೆ ಮಾಡಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಂದ ಅಕ್ರಮವಾಗಿ ಬಡ್ಡಿ ಹಣ ಪಡೆಯುವ ಆಸೆಯಿಂದ ರೂ.10,00,000/ ಕೇಳಿದ್ದು ಈಗ ಈ ದಾವೆ ಹಾಕಿ ಪ್ರತಿವಾದಿಗಳಿಗೆ ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕ್ರಯಪತ್ರವನ್ನು ನೋಂದಾಯಿಸಲು 11 ಇ ಸ್ಕೆಚ್ ಅವಶ್ಯಕತೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ವಾದ ಪತ್ರದಲ್ಲಿ 11 ಇ ಸ್ಕೆಚ್‌ಗಾಗಿ ಕ್ರಯ ಪತ್ರ ನೋಂದಾಯಿಸಲು ಮೂಂದೂಡಲಾಗಿತ್ತು ಎಂದು ನಾನು ಹೇಳಿಲ್ಲ.

ಪ್ರತಿವಾದಿಗಳಿಗೆ ಮತ್ತು ಸರ್ವೇ ನಂಬರ್ 114 ಕ್ಕೆ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ನಿಪಿ.2 ರಂತೆ ಪ್ರತಿವಾದಿಗಳು ಯಾವುದೇ ಪತ್ರ ಬರೆದು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ.2 ರ ಪತ್ರದಲ್ಲಿ ಹೇಳಿದಂತೆ ಪ್ರತಿವಾದಿಗಳಿಗೆ ರೂ.1,00,000/ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ರೂ.1,00,000/ ನೀಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ಕ್ಕೆ ಪ್ರತಿವಾದಿಗಳು ಯೂರು ಸಹಾ ಸಹಿ ಹಾಗೂ ಹೆಬ್ಬೆಟ್ಟಿನ ಗುರುತನ್ನು ಹಾಕಿಲ್ಲ ಎಂದರೆ ಸರಿಯಲ್ಲ. ನಿಪಿ.1 ಮತ್ತು 2 ರಲ್ಲಿರುವ ಸಹಿಗಳಿಗೆ ಮತ್ತು ಹೆಬ್ಬೆಟ್ಟಿನ ಗುರುತುಗಳಿಗೆ

ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೌಲ್ಯ ಹೆಚ್ಚಾಗಿದ್ದರಿಂದ ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸಾಲದ ಹಣ ಹಿಂಪಡೆಯದೆ ಸುಳ್ಳು ದಾವೆ ಹೂಡಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)
ಓದಿ ಹೇಳಿ ಕೇಳಿ ಸರಿಯಾಗಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.